

# ಲಾಲ್‌ಸಿಂಗ್ ಛಡ್ಡಾ ಸಿಂಗಾರಕ್ಕೆ ಅಮೀರ್ ಸಂಕಲ್ಪ

■ ವಿಶಾಖ ಎನ್.

ಕಥಾಹಂದರ ಹೇಗಿದ್ದರೆ ಜನ ಮೊದಲಿನಂತೆ ಮುಗಿಬಿದ್ದು ಸಿನಿಮಾ ನೋಡುತ್ತಾರೆ ಎಂಬ ಜಿಜ್ಞಾಸೆ ಮೊದಲೇ ಹಿಂದಿ ಚಿತ್ರರಂಗವನ್ನು ಕಾಡುತ್ತಿದೆ. ಈಗ ಚಿತ್ರದ ಟ್ರೈಲರ್ ಕೂಡ ತಲೆಮೇಲೆ ಕೈಹೊತ್ತು ಕೂರುವಂತೆಯೋ, ತಲೆ ಕೆರೆದುಕೊಳ್ಳುವಂತೆಯೋ ಮಾಡುತ್ತಿರುವುದು ಸೋಜಿಗವಾದರೂ ಸತ್ಯ.

ಅಮೀರ್ ಖಾನ್ ವರ್ಷಗಳಿಂದ ಉಜ್ಜುತ್ತಲೇ ಇರುವ 'ಲಾಲ್‌ಸಿಂಗ್ ಛಡ್ಡಾ' ಸಿನಿಮಾದ ಮೊದಲ ಟ್ರೈಲರ್‌ಗೆ ಮಿಶ್ರ ಪ್ರತಿಕ್ರಿಯೆ ಸಿಕ್ಕಿದ್ದು ಇಂಥದೊಂದು ಬೆಳವಣಿಗೆಗೆ ಕಾರಣ.

ವಿನ್‌ಸ್ಟನ್ ಗ್ರೂಮ್ ನಿರ್ದೇಶನದ ಅಮೆರಿಕನ್ ಚಿತ್ರ 'ಫಾರೆಸ್ಟ್ ಗಂಪ್' 1994ರಲ್ಲಿ ತೆರೆಕಂಡಿತ್ತು. ಅದರ ರೀಮೇಕ್ ಹಕ್ಕನ್ನು 2018ರಲ್ಲಿ ಅಮೀರ್ ಪಡೆದುಕೊಂಡರು. ಅದೇ 'ಲಾಲ್ ಸಿಂಗ್ ಛಡ್ಡಾ' ಆಗಿ ತಯಾರಾಗುತ್ತಿದೆ. ಆಗಸ್ಟ್ 11ರಂದು ಇದು ಬಿಡುಗಡೆಯಾಗಲಿದೆ. ಅದಕ್ಕೆ ಈಗಿನಿಂದಲೇ ಹಂತ ಹಂತವಾಗಿ ಪ್ರಚಾರವನ್ನು ಅಮೀರ್ ಆರಂಭಿಸಿದ್ದಾರೆ. ಮೊದಲ ಟ್ರೈಲರ್ ಬಗೆಗೆ ಎಲ್ಲರಿಂಗ ಸಕಾರಾತ್ಮಕ ಪ್ರತಿಕ್ರಿಯೆ ಬಂದಿಲ್ಲ ಎನ್ನುವುದನ್ನು ಗಂಭೀರವಾಗಿ ಪರಿಗಣಿಸಿರುವ ಅವರು, ಇನ್ನೊಂದು ಟ್ರೈಲರ್‌ನಲ್ಲಿ ಕುತೂಹಲ ಹೆಚ್ಚಿಸುವಂತೆ ಎಡಿಟ್ ಮಾಡಿಸಲು ಟೊಂಕ ಕಟ್ಟಿದ್ದಾರೆ.

ನಟರೂ ಆಗಿರುವ ಅತುಲ್ ಕುಲಕರ್ಣಿ ಮೂಲಚಿತ್ರದ ತಿರುಳನ್ನು ಮೊದಲು ಹಿಂದಿಯಲ್ಲಿ ಬರೆದಿದ್ದರು. ಅದನ್ನು ಓದಿದ ಮೇಲೆ ಅಮೀರ್ ಹಲವು ವರ್ಷಗಳ ಕಾಲ ಅದನ್ನು ಸಿನಿಮಾ ಮಾಡಬೇಕೋ ಬೇಡವೋ ಎಂದು ಯೋಚಿಸಿದರು. ಅತುಲ್ ಅದನ್ನು ಬರೆದಿರುವುದು ಹೌದೇ ಎನ್ನುವ ಅನುಮಾನವನ್ನೂ ವ್ಯಕ್ತಪಡಿಸಿದ್ದರು. ಖುದ್ದು ಅತುಲ್ ಅದರ ಸಾರವನ್ನು ಮೌಖಿಕವಾಗಿ ವಿವರಿಸಿದ ಮೇಲೆ ಅಮೀರ್ ಅದರ ರೀಮೇಕ್ ಹಕ್ಕನ್ನು ಪಡೆಯಲೇಬೇಕು ಎಂದು ನಿರ್ಧರಿಸಿದರು. ಅದಕ್ಕೇ ಏಳು ವರ್ಷ ಬೇಕಾಯಿತೆನ್ನುವುದು ವಿಶೇಷ.

2017ರಲ್ಲಿ ತೆರೆಕಂಡ 'ಸೀಕ್ರೆಟ್ ಸೂಪರ್‌ಸ್ಟಾರ್' ಚಿತ್ರವನ್ನು ಅದ್ವೈತ್ ಚಂದನ್ ನಿರ್ದೇಶಿಸಿದ್ದರು. ಆ ವರ್ಷ ಅತಿ ಹೆಚ್ಚು ಹಣ ಗಳಿಸಿದ ಭಾರತದ ಸಿನಿಮಾಗಳಲ್ಲಿ ಎರಡನೆಯದು ಎನ್ನುವ ಹೆಗ್ಗಳಿಕೆ ಅದರದ್ದಾಗಿತ್ತು.

ಅಕ್ಷಯ್‌ಕುಮಾರ್ ಅಭಿನಯದ 'ರಕ್ಷಾ ಬಂಧನ್' ಸಿನಿಮಾ ಕೂಡ ಆಗಸ್ಟ್ 11ರಂದೇ ತೆರೆಕಾಣಲಿದೆ. ಅಕ್ಷಯ್‌ಗೆ ಗೆಲುವು ಈಗ ಹೇಗೆ ಅನಿವಾರ್ಯ ಆಗಿದೆಯೋ, ಅಮೀರ್‌ಗೆ ತಮ್ಮ ಮಹತ್ವಾಕಾಂಕ್ಷಿ ಚಿತ್ರ ಗೆಲ್ಲಲೇಬೇಕೆನ್ನುವುದೂ ಅಷ್ಟೇ ಮುಖ್ಯವಾಗಿದೆ. ■

# ಪ್ರಭಾಸ್ ಮುಂದಿನ ಇನಿಂಗ್ಸ್...



'ಆದಿಪುರುಷ್'ನ ರಾಮ, 'ಸಲಾರ್'ನ ಬಲಭೀಮ, 'ಪ್ರಾಜೆಕ್ಟ್ ಕೆ'ಯ ಸೈ–ಫೈ ಥ್ರಿಲ್ಲರ್‌ನ ನಾಯಕ, 'ಸ್ಪಿರಿಟ್'ನ ಪಾದರಸದಂಥ ಪಾತ್ರಧಾರಿ... ಇವೆಲ್ಲವೂ ಪ್ರಭಾಸ್ ನಟಿಸುತ್ತಿರುವ ಹಾಗೂ ನಟಿಸಲಿರುವ ಚಿತ್ರಗಳ ಪರಿ. 'ರಾಧೆ ಶ್ಯಾಮ್' ತೆಲುಗು ಸಿನಿಮಾ ತಾರಾ ವರ್ಚಸ್ಸನ್ನು ತಗ್ಗಿಸಿದಂತೆ ಕಂಡರೂ, ಪ್ರಭಾಸ್ ಆತ್ಮವಿಶ್ವಾಸವನ್ನು ಅದೇನೂ ಅಲ್ಲಾಡಿಸಿಲ್ಲ.

'ಸಲಾರ್'ನಲ್ಲಿ ಪ್ರಶಾಂತ್ ನೀಲ್ ಅವರ ಕೈಗೆ ಯಾವ ಆಯುಧ ಕೊಡುವರೋ ಎಂಬ ಕುತೂಹಲ ಮಡುಗಟ್ಟಿದೆ. 'ಮಹಾನಟಿ'ಯಂತಹ ಹಿಡಿದಿಟ್ಟುಕೊಂಡ ಚಿತ್ರ ಕಟ್ಟಿಕೊಟ್ಟ ನಾಗ್ ಅಶ್ವಿನ್ ನಿರ್ದೇಶನದ 'ಪ್ರಾಜೆಕ್ಟ್ ಕೆ'ಯಲ್ಲಿ ದೀಪಿಕಾ ಪಡುಕೋಣೆ, ಅಮಿತಾಭ್ ಬಚ್ಚನ್ ತರಹದ ದಿಗ್ಗಜರೂ ಇರುವುದು ನಿರೀಕ್ಷೆ ಗರಿಗೆದರುವಂತೆ ಮಾಡಿದೆ. 'ಸ್ಪಿರಿಟ್' ಸಿನಿಮಾದ ಚಿತ್ರಕಥೆ ಬರೆದುಕೊಂಡು ಕಣ್ಣರಳಿಸಿಕೊಂಡಿರುವವರು ಸಂದೀಪ್ ರೆಡ್ಡಿ ವಂಗಾ. ಪ್ರಭಾಸ್ ಮತ್ತೆ ಆ್ಯಕ್ಷನ್ ವೇಷದಲ್ಲಿ ಹೆಚ್ಚು ಕಾಣಿಸಿಕೊಳ್ಳಲಿದ್ದಾರೆ ಎನ್ನಲು ಇವಿಷ್ಟು ಉದಾಹರಣೆಗಳು ಸಾಕು.

'ಬಾಹುಬಲಿ' ಸರಣಿ ನಂತರ ಪ್ರಭಾಸ್ ಮೋಡಿ ಕಡಿಮೆಯಾಗಿದೆ ಎಂದು ಅವರ ಅಭಿಮಾನಿಗಳು ಬೇಸರಿಸಿಕೊಂಡಿದ್ದಾರೆ. 'ರಾಧೆ ಶ್ಯಾಮ್'ನಲ್ಲಿನ ಲವರ್ ಬಾಯ್ ಗೆಟಪ್ ಕೂಡ ಜನರಿಗೆ ಹಿಡಿಸಿರಲಿಲ್ಲ. ■